

## ಸಮುದ್ರ ಮಥನ

'ಸುಖೀದಾಂಪತ್ಯ' ಅಂಕಣದಲ್ಲಿ ಪ್ರಕಟವಾಗುತ್ತಿರುವ 'ಅನ್ಯೋನ್ಯತೆಗೆ ಹುಡುಕಾಟ' ಸರಣಿಯು ಅತ್ಯಂತ ಸೂಕ್ತವಾದ ಲೇಖನ ಮಾಲೆಯಾಗಿದೆ. ಇದು ಸಾರ್ವಕಾಲಿಕ ಮೌಲ್ಯವುಳ್ಳದ್ದಾಗಿದೆ.

—ಲಲಿತಾ ಶಾಸ್ತ್ರಿ

### ಶ್ರಾವಣ ಸಂಜೀವಿನಿ

ಆಗಸ್ಟ್ 8ರ ಸಂಚಿಕೆಯಲ್ಲಿ ಮಹತಿ ಮತ್ತು ಡಿ.ಎಂ. ಪ್ರಶಾಂತ ಕುರ್ಕೆ ಬರೆದಿರುವ 'ಶ್ರಾವಣ ಸಂಜೀವಿನಿ' ಲೇಖನ ಸೊಗಸಾಗಿದೆ. ಪ್ರಕೃತಿಯಲ್ಲಾಗುವ ಬದಲಾವಣೆಗನುಸಾರವಾಗಿ ಮಾಸಗಳ ನಾಮಕರಣಗೊಂಡಿದೆ. ಗಿಡ ಮರಗಳೆಲ್ಲವೂ ಹಚ್ಚ ಹಸಿರು ಹೊದ್ದು ಥಳಥಳಿಸಿ ಕಣ್ಮನ ಸೆಳೆಯುವಂತೆ ಸೊಬಗು ನೀಡುವ ಶ್ರಾವಣ ಮಾಸ. ಸಾಲು ಹಬ್ಬಗಳ ಸಂಭ್ರಮ ಸಡಗರವೂ ಈ ಮಾಸದಲ್ಲಿರುತ್ತದೆ. ಉತ್ತಮ ಬರಹಕ್ಕೆ ಆಹ್ಲಾದಕರ ಚಿತ್ರಗಳೂ ಸಾತ್ ನೀಡಿವೆ. ಶ್ರಾವಣ ಮಾಸದ ತೆರೆ ಸರಿಯುತ್ತಿದ್ದಂತೆ ನಿಸರ್ಗದಲ್ಲಿ ಮೈದೋರುವ ಅನೇಕ ಸುಂದರ ದೃಶ್ಯಗಳು ಕವಿಗೆ ಹೊಸ ಕವಿತೆಗಳನ್ನು ಹೊಸೆಯುವ ತವಕವನ್ನು, ಚಿತ್ರಕಾರನಿಗೆ ಕಲಾಕೃತಿ ರಚಿಸುವ ಬಿಡಿಸುವ ಚೋದನೆಯನ್ನೂ ನೀಡುತ್ತದೆ. ಪುರಾಣ ಹರಿಕಥೆಗಳನ್ನು ಶ್ರವಣ ಮಾಡುವ ಪುಣ್ಯಕಾಲವೂ ಹೌದು.

—ಮಧುರ ಸುಬ್ರಹ್ಮಣ್ಯ, ಕೆ.ವಿ.ರಾಜಲಕ್ಷ್ಮಿ ಬೆಂಗಳೂರು,
ಕೆ.ಪಿ.ರಾಮಗುಂಡಿ, ಬೈಲಹೊಂಗಲ

ಶ್ರಾವಣ ಮಾಸದ ರಮ್ಯ ಮನೋಹರ ರುದ್ರ ಭಯಂಕರ ಪ್ರಕೃತಿ ವರ್ಣನೆ ಮತ್ತು ಕವಿಭಾವಸಾರ ಮುಂತಾದ ವೈವಿಧ್ಯಮಯ ನೋಟವು ಈ ಲೇಖನದಲ್ಲಿ ಅದ್ಭುತವಾಗಿ ನಿರೂಪಿತವಾಗಿದೆ. ಮುಖಪುಟವಂತೂ ಬಹು ಸೊಗಸಾಗಿದೆ. ಶ್ರಾವಣ ಸಂಭ್ರಮಕ್ಕೆ ಶ್ರಾವಣ ಸಂಜೀವಿನಿಯ ಮುನ್ನುಡಿ ಬರೆದ 'ಸುಧಾ'ಗೆ ಅಭಿನಂದನೆ.

—ಸುಶೀಲಾ ಸೋಮಶೇಖರ್, ಹಾಸನ

### ಉತ್ತಮ ಸರಣಿ

ಡಾಕ್ಟರ್ ವಿನೋದ
ಛೆ ಬ್ಬಿಯ ವ ರ

### ನಮ್ಮ ನೆಚ್ಚಿನ ಪತ್ರಿಕೆ

ಓದುಗರಿಗೆ ಮುದ ನೀಡುವ, ನಾ ಕಂಡ ವಾರಪತ್ರಿಕೆ
ಅದುವೇ ನಮ್ಮಯ ನೆಚ್ಚಿನ 'ಸುಧಾ' ಪತ್ರಿಕೆ
ಪಶ್ಚಾತ್ತಾಪ–ರವೀಂದ್ರರ ಮನದ ಸಂತಾಪ
ಲಕ್ಷ್ಮೀ ಯಶೋಗಾಥೆ; ಜಯಚಾಮರಾಜರ ಚಿತ್ರಣ
ಈ ಪತ್ರಿಕೆ ನಮ್ಮಂಥವರಿಗೆ ಪ್ರತೀ ವಾರದ ಪ್ರೇರಣ.

—ರೇಖಾ ಚೈತನ್ಯ, ಬೆಂಗಳೂರು

### ಕುತೂಹಲವೇನಿಲ್ಲ

ಆಗಸ್ಟ್ 1ನೇ ಸಂಚಿಕೆಯಲ್ಲಿ ಡಾ. ಎಚ್.ಎಸ್. ಅನುಪಮಾ ಅವರು ಬರೆದಿರುವ 'ಹಿಮಕಣಿವೆ ಶೀತಲ ರಹಸ್ಯಗಳು' ಲೇಖನದಲ್ಲಿ ನೇಪಾಳದಲ್ಲಿ 'ಕುಮಾರಿ' ಪದ್ಧತಿಯ ಬಗ್ಗೆ ವಿಷಾದಿಸಿದ್ದಾರೆ. ಆ ಸಮುದಾಯದವರು ಕುಮಾರಿಯನ್ನು ತಮ್ಮ ಸಾಂಸ್ಕೃತಿಕ ನಾಯಕಿಯಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಆದರೆ, ನಮ್ಮ ದೇಶದಲ್ಲಿ ಒಂದು ಊರಿನಲ್ಲಿ ಇಬ್ಬರ ಮೈಮೇಲೆ ದೇವರು ಬರುತ್ತಿರುವಾಗ ಇದನ್ನು ಓದಿ ಕುತೂಹಲ ಏನೂ ಕಾಣಲಿಲ್ಲ.

– ದೆಗ್ಗನಹಳ್ಳಿ ಆನಂದ್

### ನಕಲಿ ಡಾಕ್ಟರ್ ಹಾವಳಿ

ರಘುನಾಥ ಚ. ಹ. ಅವರು ಆಗಸ್ಟ್ 15ರ ಸಂಚಿಕೆಯ 'ನಿಮ್ಮೊಡನೆ' ಪುಟದಲ್ಲಿ ಬರೆದಿರುವ 'ಡಾಕ್ಟರ್‌ಗಳಿದ್ದಾರೆ ಎಚ್ಚರಿಕೆ' ಲೇಖನ, ವಾಮಮಾರ್ಗದಲ್ಲಿ ಡಾಕ್ಟರೇಟ್ ಗಳಿಸುವ ಪರಿಯನ್ನು ಕೂಲಂಕಷವಾಗಿ ವಿಶ್ಲೇಷಣೆ ಮಾಡಿದೆ. ಇಂಥ ನಕಲಿ ಡಾಕ್ಟರೇಟ್ ಪಡೆದವರ ಬಳಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟ ಹೇಗಿರಬಹುದು ಎಂಬುದನ್ನು ಊಹೆಮಾಡಲು ವಿಶೇಷ ಪರಿಶ್ರಮ ಬೇಕಿಲ್ಲ.

—ಎಸ್. ಪ್ರಭಾ, ಬೆಂಗಳೂರು



### ಮನಮೋಹಕ ಬೆಲ್ಲಿನೃತ್ಯ

ಆಗಸ್ಟ್ 8ರ ಸಂಚಿಕೆಯಲ್ಲಿ ಧಾರಿಣಿ ಮಾಯಾ ಅವರ 'ಬೆಳ್ಳಿಬಾಲೆಯರ ಬೆಲ್ಲಿ ಡಾನ್ಸ್' ಕುತೂಹಲಕಾರಿಯಾಗಿ ಮೂಡಿಬಂದಿದೆ. ಈ ಅಪೂರ್ವ ನೃತ್ಯಶೈಲಿಯಿಂದ ದೇಹಕ್ಕೆ ಆಗುವ ಉಪಯೋಗಗಳನ್ನು ಸೂಕ್ತ ಮಾಹಿತಿಗಳ ಮೂಲಕ ಪ್ರಚುರಪಡಿಸಿದ್ದಾರೆ. ದಕ್ಷಿಣ ಭಾರತದಲ್ಲಿ ಈ ಬೆಲ್ಲಿ ನೃತ್ಯ ಅಷ್ಟಾಗಿ ಪ್ರಚಲಿತವಿರದ ಕಾರಣ ಪರಕೀಯ ಭಾವನೆ ಇರುವುದು ಸಹಜ. ಆದರೆ ಕಲಾಸಕ್ತರು, ಹೊಸತನಕ್ಕೆ ತುಡಿಯುವ ಮನವಿರುವ ನವಪೀಳಿಗೆ ಈ ಕಲೆಯನ್ನು ತಮ್ಮದಾಗಿಸಿ ಮುಂದಿನ ಪೀಳಿಗೆಗೆ ಪಸರಿಸಿದರೆ, ಈ ನೃತ್ಯಕಲೆ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು, ಬೆಳೆಯುವುದರಲ್ಲಿ ಸಂದೇಹವಿಲ್ಲ.

—ಮನುಶ್ರೀ, ಮೂಡಿಗೆರೆ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಇ–ಮೇಲ್: feedback@sudha.co.in


